Sri J. MOHAMED IMAM.—Will all the Ministers or at least the concerned Ministers be here ? I find that some have gone to Delhi and some to Indore. Unless there is a corresponding response from the Ministry or unless they take lively interest in the non-official resolutions, what is the use of having discussion here ?

Mr. SPEAKER.—After all, we have to carry on our business. The Cabinet has joint responsibility and the Ministers who will be present will take care of the debate. Shall we sit on the 30th ?

Sri B. HUTCHE GOWDA (Turuvekere).—That is not possible.

Sri J. MOHAMED IMAM.—We shall discuss it among ourselves and let you know our views in the matter.

PAPERS LAID ON THE TABLE

SECRETARY.—Sir, I beg to lay on the Table of the House the Hyderabad Agricultural Debtors' Relief (Mysore Amendment) Bill, 1956, as passed by the Legislative Council.

BUDGET FOR 1956-57

Demands for Grants for the Period of Five Months Ending 31st March 1957—(*Contd.*)

Sri B. HUTCHE GOWDA (Turuvekere).—The Finance Minister is not here.

Mr. SPEAKER.—It has been defined in the Rules of some of the Assemblies and in Lok Sabha that the Finance Minister includes any Minister.

*ಶ್ರೀ ಬಿ. ಹುಚ್ಚೇಗೌಡ.—ಈ ಬಡ್ಜೆಟ್ಟಿನಲ್ಲಿ ಕೆಲವು ಹೆಸರುಗಳಿವೆ. ಅವು ನಮ್ಮ ಹಳೆಯ ಮೈಸೂರಿಗೆ ಹೊಸ ಹೆಸರುಗಳು. ಮರ್ಜನಬ್, ಮಹಾವರ್,ಯೋಮಿಯಾಸ್ ಅಂದರೇನು, ಅವರ ಕೆಲಸವೇನು ಎಂಬುದು ಗೊತ್ತಾಗುವುದಿಲ್ಲ. ಇದನ್ನು ಸ್ವಲ್ಪ ಮಟ್ಟಿಗಾದರೂ ವಿವರಿಸಿದ್ದರೆ ಚೆನ್ನಾಗಿತ್ತು. ಸ್ವಾಮಿ, ನಮ್ಮ ದೇಶದಲ್ಲಿಗ್ರಾಮಾಂತರಪ್ರದೇಶಗಳಲ್ಲಿ ಸಂಚಾರ ಸೌಲಭ್ಯ ಬಹಳ ಮುಖ್ಯವಾದುದು ; ಅದು ಅಷ್ಟಾಗಿ ದೊರೆತಿಲ್ಲ. ಈಗಿನ ಬಡ್ಜೆಟ್ಟಿನಲ್ಲಿ 5 ಲಕ್ಷ ರೂಪಾಯಿ ಮಾತ್ರ ಕೊಟ್ಟಿರುವುದು ಈ ವಿಶಾಲ ಮೈಸೂರಿಗೆ ಏನೇನೂ ಸಾಲದು. ಇದು ಖಂಡಿತವಾಗಿ ಜಾಸ್ತಿಯಾಗಬೇಕು. ಮುಖ್ಯವಾಗಿ ವೆಸ್ಟ್ ಕೋಸ್ಟಿನಲ್ಲಿ ಸಂಚಾರ ಸೌಲಭ್ಯ ಬಹಳ ಕಡಿಮೆಯಿದೆ ಎಂದು ಅಲ್ಲಿ ಒಂದು ರಸ್ತೆಗೆ ಸುಮಾರು 16 ಲಕ್ಷ ರೂಪಾಯಿಗಳನ್ನು ತೋರಿಸಿದ್ದಾರೆ, ಅದಕ್ಕೆ ತಪಶೀಲಿಲ್ಲ. ಈಗ ಇಲ್ಲಿ ದಿರುವಕಡೆ ರಸ್ತೆಯಾಗಬೇಕಾದ ಅವಶ್ಯಕತೆ ಬಹಳ ವಾಗಿದೆ. ಕೆ ರವಲ ವೆಸ್ಟ್ ಕೋಸ್ಟ್‌ರೋಡ್ ಒಂದಕ್ಕೆ ಹಣ ಒದಗಿಸಿದ್ದಾರೆ. ಮಲೆನಾಡಿನಲ್ಲಿ ಸಂಚಾರ ಸೌಲಭ್ಯ ಸರಿಯಾಗಿಲ್ಲ, ರಸ್ತೆ ಕೆಟ್ಟಿದೆ. ಇಡೀ ಮೈಸೂರು ದೇಶದ ರಾಜಧಾನಿಯಾದ ಬೆಂಗಳೂರಿಗೆ ರಸ್ತೆಗಳು ಹೇಗೆ ಅವಶ್ಯಕವೋ ಹಾಗೆಯೇ ಸಮುದ್ರತೀರದಲ್ಲಿ ಒಂದು ಊರಿನಿಂದ ಮತ್ತೊಂದು ಊರಿಗೆ ಸಂಚಾರ ಸೌಲಭ್ಯ ದೊರಕಬೇಕಾದ್ದು ಬಹಳ ಅವಶ್ಯಕ. ಈಗ ಹಣ ಒದಗಿಸಿರುವ ರಸ್ತೆ ಎಲ್ಲಿಗೆ ಹೋಗುತ್ತದೆ, ಅದರ ಉದ್ದವೆಷ್ಟು ಎಂಬುದನ್ನು ಕೂಡ ಆರ್ಥಿಕ ಮಂತ್ರಿಗಳು ತಮ್ಮ ವರದಿಯಲ್ಲಿ ಸೂಚಿಸಿಲ್ಲ.

ಇದಲ್ಲದೆ ರೈಲ್ವೆ ವಿಚಾರದಲ್ಲಿ ನೋಡಿದರೆ ನಮ್ಮ ದೇಶ ಇಂಡಿಯಾದೇಶದ ಇತರ ಪ್ರಾಂತಗಳಿಗಿಂತ ಬಹಳ ಮಟ್ಟಿಗೆ ಕಡಿಮೆ ಸೌಕರ್ಯ ಹೊಂದಿದೆ. ಇದನ್ನು ಕೂಡ ಒತ್ತಾಯಮಾಡಿ ಅದಷ್ಟು ಜಾಗ್ರತೆ ಪೂರ್ವತೀರದಲ್ಲಿರುವಂತೆ ಪಶ್ಚಿಮ ತೀರದಲ್ಲೂ ಮತ್ತು ಇತರ ಕಡೆಯೂ ರೈಲ್ವೆ ಲೈನನ್ನು ಹಾಕಬೇಕಾದ್ದು ಅವಶ್ಯಕವೆಂದು ಹೇಳಬೇಕು. ಈ ವಿಚಾರದಲ್ಲಿ ಇಂಡಿಯಾ ಸರ್ಕಾರದೊಡನೆ ಜಾಗ್ರತೆಯಾಗಿ ವ್ಯವಹಾರ ನಡೆಸುತ್ತಾರೆಂದು ನಂಬಿದ್ದೇನೆ.

ಆಮೇಲೆ ರೂರಲ್ ಕಮ್ಯುನಿಕೇಷನ್ನಿಗೆ ಕೊಟ್ಟಿರುವ 5 ಲಕ್ಷದ ಸಹಾಯದ ವಿಚಾರ ಹೇಳಿದ್ದಾರೆ; ಕಮ್ಯೂನಿಟಿ ಡೆವಲಪ್‌ಮೆಂಟ್ ಕೆಲಸಗಳು, ಲೋಕಲ್ ಡೆವಲಪ್‌ಮೆಂಟ್ ಕೆಲಸಗಳು, ಎ. ಇ. ಎಸ್. ಕೆಲಸಗಳ ವಿಚಾರವಿದೆ. ಇದಕ್ಕೆ ಸುಮಾರು ಒಂದು ಕೋಟಿ 20 ಲಕ್ಷ ಖರ್ಚಾಗುತ್ತದೆ. ಇದರ ಜೊತೆಗೆ ರೂರಲ್, ವಾಟರ್ ಸಪ್ಲೈ ವರ್ಕ್ಸ್, ಐ.ವಿ.ಸಿ. ಫಂಡಿನ ಕೆಲಸ, ಗ್ರಾಮಾಭಿವೃದ್ಧಿ ಮುಂತಾದವಕ್ಕೆ ಸ್ವಲ್ಪ ಹಣವಿದೆ, ಇದರ ಉದ್ದೇಶ ಅರ್ಥವಾಗುವುದಿಲ್ಲ. ಈ ಕೆಲಸಗಳನ್ನು ಯಾರು ಯಾರು ಮಾಡಬೇಕು, ಇದರಲ್ಲಿ ಹೊಂದಾಣಿಕೆಯಿದೆಯೇ ಎಂಬುದು ಗೊತ್ತಿಲ್ಲ. ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿಯೆಂದು ಮಾಡಿದರು. ಒಂದು ವರ್ಷವಾದಮೇಲೆ ಅದು ನಿಂತುಹೋಯಿತು. ನೂರು ಇನ್ನೂರು ಗಜ ರಸ್ತೆಮಾಡಿ ಕೈಬಿಡುತ್ತಾರೆ. ಇನ್ನೊಂದು ಏಜೆನ್ಸಿ ಆ ಕೆಲಸ ಮಾಡುವಹಾಗಿಲ್ಲ. ಹೀಗಾಗಿ ಆ ಕೆಲಸ ಅಲ್ಲಗೆ ನಿಲ್ಲುತ್ತದೆ. ಡಿಸ್ಟ್ರಿಕ್ಟ್ ಬೋರ್ಡಿಗೆ ಹೇಳಿದರೆ ಅದು ಈಗ ಕೆಲಸಮಾಡುತ್ತಲೇ ಇಲ್ಲ ; ಮೂರು ವರ್ಷಗಳಿಂದಲೂ ಅದು ತನ್ನ ನಿತ್ಯದ ಕೆಲಸವನ್ನು ಕೂಡ ನೋಡಿಕೊಳ್ಳುವುದಕ್ಕೆ ಸಾಧ್ಯವಿಲ್ಲವಾಗಿದೆ. ಹೊಸ ರಸ್ತೆ ತೆಗೆದುಕೊಳ್ಳುವುದಿರಲಿ, ಹಳೆಯ ರಸ್ತೆ ರಿಪೇರಿಗೇ ಹಣವಿಲ್ಲ, ಸಂಬಳ ಕೊಡುವುದಕ್ಕೆ ಹಣವಿಲ್ಲ. ಗ್ರಾಮಾಭಿವೃದ್ಧಿಯ ಕೆಲಸವೆಲ್ಲವೂ ಸರಿಯಾಗಿ ನ್ಯಾಯವಾಗಿ ಡಿಸ್ಟ್ರಿಕ್ಟ್ ಬೋರ್ಡಿನಿಂದಲೇ ನಡೆದರೆ ಬಹಳ ಅನುಕೂಲವಾಗುತ್ತದೆ ; ನಾಲ್ಕಾರು ಏಜೆನ್ಸಿ ಮೂಲಕ ನಡೆಸುವುದರಿಂದ ಯಾವುದೂ ಸರಿಯಾಗಿ ಆಗುತ್ತಿಲ್ಲ. ಕಮ್ಯೂನಿಟಿ ಡೆವಲಪ್‌ಮೆಂಟ್ ಕೆಲಸ ಮತ್ತು ಇನ್ನೂ ಕೆಲವು ಯೋಜನೆಗಳ ಕೆಲಸ ಬಹಳ ಶೋಚನೀಯವಾಗಿದೆ ; ಹಣ ವ್ಯರ್ಥ ಖರ್ಚಾಗುತ್ತಿದೆ. ಇದರಿಂದ ಒಂದು ಕಾಸಿನ ಪ್ರಯೋಜನ ಕೂಡ ಇಲ್ಲ. ಒಂದು ಉದಾಹರಣೆ ಹೇಳುವುದಾದರೆ ನವ ತಾಲ್ಲೂಕಿನಲ್ಲಿರುವ ಸುಮಾರು 200 ಗ್ರಾಮಗಳಲ್ಲಿ 160 ಗ್ರಾಮಗಳಿಗೆ ಮಾತ್ರ ಇದನ್ನು ಅನ್ವಯಿಸಿದ್ದಾರೆ.

1 P.M.

ಅದೂ ಅಲ್ಲದೆ ಈ ಗ್ರಾಮಗಳಿಗೆಲ್ಲಾ ಎರಡೇ ಜೀಪುಗಳನ್ನು ಕೊಟ್ಟಿದ್ದಾರೆ. ಇವೆರಡರಲ್ಲಿ ಒಂದೇ ಒಂದು